ತಡೀರಿ... ಸೊಲ್ಪ ತಡೀರಿ... ಈ ಬೆಂಗಳೂರಾಗ ಮಳೀ ಬಂದಾಗ ಇಂಥಾ ಯಾವ ವಾಸ್ನಿನೂ ಬರೂದಿಲ್ಲರಿ. ಒಂದೊಂದು ಊರಿನ ಮಳಿಗೂ ಒಂದೊಂದು ವಾಸ್ನಿ ಇರ್ತದ. ಎಲ್ಲಾರೂ ಹೇಳೂಹಂಗ ನಾನು ಮಣ್ಣಿನ ವಾಸ್ನಿ ಬಗ್ಗೆ ಹೇಳೂದಿಲ್ರಿ... ಬೀದರ್ ಮಳೀಗೆ ಬಳ್ಳೊಳ್ಳಿ ಚುರಮುರಿ ವಾಸ್ನಿ ಇದ್ದಂಗ ಗುಲ್ಬರ್ಗ ಮಳೀಗೆ ಮಿರ್ಚಿಭಜಿ ವಾಸ್ನಿ ಬರ್ತದ. ಹಂಗೇ ಸೊಲ್ಪ ಅತ್ತತ್ತ ಹೋದ್ರ ಪಾನೀಪುರಿ, ಖಟ್ಲೆಟ್ ಹಂಚಿಗೆ ಹಾಕಿ ಖಟಖಟ ಸಪ್ಪಳಾ ಮಾಡೂಮುಂದ ಹಂಚಿಗಂಟಿದ ಆಲೂಗಡ್ಡಿ ವಾಸ್ನಿ ಹಂಗೇ ಹಸಿವು ಕೆರಳಿಸಿ ಸುಮ್ನಾಗ್ತದ.

ಆದ್ರ ನಾಲಗಿ ಚಪಲ ಸುಮ್ನಾಗಿಸಬೇಕಂದ್ರ ಆ ಹುಳಿನೀರಿಗೆ ಸುರಿದ ಖಾರ, ಪುದಿನಾ ವಾಸ್ನಿ, ಹಸಿಕೊತ್ತಂಬರಿ ವಾಸ್ನಿ ಆಘ್ರಾಣಿಸ್ಕೊಂತ ಹೊಟ್ಟೀಗೆ ಇಳಿಸಬೇಕು ನೋಡ್ರಿ... ಅವಾಗ ಅರಾಮನಸೂದು.

ಛೆ!... ಮಾಫ್ ಮಾಡ್ರಿ... ಮಳೀಬಂದ್ರ ಹಂಗೇ.. ನಾವು ಎಲ್ಲೆಲ್ಲೋ ಹೊಂಟ ಬಿಡ್ತೀವಿ... ಮತ್ತ ಮಳೀಯೊಳಗ ನೆನಿಯೂ ಸೀನಿಗೇ ಬರೂನು. ನಕ್ಕಿ ಅಲ್ಲೇ... ಎಲ್ಲಿ ನಿಂತಿದ್ವಿ ಹೇಳ್ರಿ... ಕಣ್ಣೀರು ಗಲ್ಲಕ್ಕ ಇಳದು, ಗದ್ದದ್ದಿಂದ ಬೀಳೂಮೊದ್ಲೇ ನಕ್ಕಿದ್ದೆ... ಹೌದಿಲ್ಲೋ...



ಆ ಕ್ಷಣಕ್ಕ ಪಟ್ಟನೆ ನೆನಪಾಗಿತ್ತು ನಾ ಇದೀಗ ರಸ್ತೆ ಮ್ಯಾಲೆ ಅದೀನಿ. ಮಳ್ಯಾಗ ನೆನೀಬೇಕು ಅಂತ ಬಯಸೂ ಹುಡುಗಿಯಲ್ಲ... ಮಳ್ಯಾಗ ಎಲ್ಲಿ ನನ್ನ ಮಕ್ಕಳು ನೆನೀತಾವೋ ಅಂತ ಚಿಂತೀ ಮಾಡೂ ಅಮ್ಮ ನಾ. ಹೆಜ್ಜಿ ಲಗೂಲಗೂ ಹಾಕಬೇಕು. ಈ ಮಳೀಗೆ ಒಂದು ಸಪ್ಪಳ ಐತೇನು? ಇರಾಕ ಬೇಕಲ್ಲ... ಮಳೀ ಬೀಳ್ತದ ಅಂದ್ರ... ಎಲ್ಲಿ ಹೋಗಿ ನೋಡ್ಲಿ..? ಒಂದು ಅಂಗಳಾ ಅನ್ನೂದೇ ಇಲ್ಲ, ಇಲ್ಲೀ ಮನೀಗೆ. ಹೌದಲ್ಲ... ಹೆಂಗಿರ್ತದ ಋಣಾನುಬಂಧ.

ಸಾಲೀಗೆ ಹೋಗೂದು, ಮಳೀ ಬಂದಾಗ ಪಾಟೀಚೀಲದಾಗಿನ ಪುಸ್ತಕ ಕವರಿಗೆ ಹಾಕಿ, ಕವರ್ ಮುದ್ದಿ ಮಾಡಿ ಪಾಟೀಚೀಲದಾಗ ತುರಕಿ, ಬೆನ್ನ ಮ್ಯಾಲೆ ಹಾಕ್ಕೊಂಡ್ರ, ಕಾಲ್ಚೀಲ ತಗದು, ಬೂಟ್ನಾಗ ತುರುಕಿ ಎರಡೂ ಕೈಯ್ಯಾಗ ಒಂದೊಂದು ಹಿಡಕೊಂಡು ರಸ್ತೆ ಮ್ಯಾಲ ನಿಂತ ನೀರೊಳಗ ನಡಿಯೂದು ಭಾರಿ ಖುಷಿ ಕೊಡ್ತಿತ್ತು. ಕಾಲೇಜಿನಾಗ ಇದ್ದಾಗಿನ ಮಳೀನೇ ಬ್ಯಾರೆ ನೋಡ್ರಿ... ಹಾಸ್ಟೆಲ್ಲಿನ ಖಿಡಕಿಗೆ ಒರಗಿ ನಿಂತು, ಬಿಸಿ ಚಾ ಕುಡ್ಕೊಂತ ಮಳಿ ನೋಡ್ತಿದ್ದರ ಮನಿ ನೆನಪಾಗೂದು. ಒಮ್ಮೊಮ್ಮೆ ನಾಲ್ಕೈದು ಹುಡಗ್ಯಾರು ನಮ್ಮ ನಮ್ಮ ಗಾಡಿ ಹತ್ತಿ ದಾಂಡೇಲಿ ರೋಡಿಗೆ ಹೊಂಟು ಬಿಡ್ತಿದ್ವಿ.

ಜೋರೆ ಧ್ವನಿಯೊಳಗ 'ಹಂಡ್ರೆಡ್ ಮೈಲ್ಸ್ ಮೈಲ್ಸ್' ಹಾಡ್ಕೊಂಡು ಹೋಗ್ತಿದ್ವಿ. ಎಂಥಾ ಕಾಡದು... ಅಲ್ಲಿ ಕಪ್ಪಿ ಒಟಗುಟ್ತಿದ್ರ ನಾವು ಹಾಡು ಮರತು ಕೇಳ್ತಿದ್ವಿ. ಆಮೇಲೆ ಆ ಕಪ್ಪಿ ಏನಂದು ಅಂತ ಜಿಜ್ಞಾಸೆ ಸುರು ಆಗ್ತಿತ್ತು. ನಂಗೊತ್ತಿದ್ದಂಗ ಅವೆಲ್ಲ ಸಾಲದ ಕಪ್ಪಿ ಅನಸ್ತಿದ್ವು. ಒಂದು ರೊಕ್ ರೊಕ್ ರೊಕ್... ಅಂತಿದ್ರ, ಇನ್ನೊಂದು ಕೊಡ್ರೊಕ್ ಕೊಡ್ರೊಕ್ ಅಂತ...ಮತ್ತೊಂದು ಕೊಟ್ರಾಯ್ತ್ ಕೊಟ್ರಾಯ್ತ್... ಅಂತದ ಅನಸ್ತಿತ್ತು. ನನ್ನ ಈ ತೀರ್ಮಾನಕ್ಕ ನನ್ನ ಗೆಳತ್ಯಾರು ಜೋರಗೆ ನಗ್ತಿದ್ರು. ವಟಗುಟ್ಟು ಕಪ್ಪಿ ಎಲ್ಲಾ ಅಂಜಿ ಓಡಿ ಹೋಗುಹಂಗ. ಎಂಥಾ ಮಳೀ ಅವು... ಎಲ್ಲಿ ಹೋದುವು?... ಹೋಗಿದ್ದು ಮಳೀನಾ... ಕಳದುಹೋಗಿದ್ದು ನಾನಾ? ಮಳಿ ನಿಂತೇ ಬಿಟ್ತು... ಉತ್ತರಾ??...

*